ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೧ Volume 151	ಬೆಂಗಳೂರು, ಗುರುವಾರ ನವೆಂಬರ್ ೧೭, ೨೦೧೬ (ಕಾರ್ತಿಕ ೨೬, ಶಕ ವರ್ಷ ೧೯೩೮) Bengaluru, Thursday, November 17, 2016 (Karthika 26, Shaka Varsha 1938)	ಸಂಚಿಕೆ ೪೫ Issue 45

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

COMMERCE & INDUSTRIES SECRETARIAT

CORRIGENDUM

No. CI 27 SPI 2014, Bengaluru, Dated: 02.08.2016

Sub: Project proposal of M/s Prem sugars Co. & Chemicals Corporation Ltd., - reg.

Read: Government Order No: CI 27 SPI 2014, Dated: 14.06.2016.

In the order portion of Government Order No: CI 27 SPI 2014, dated: 14.06.2016, the words;

"Government is pleased to accord approval for change of activity from Sugar project to development of "Industrial Park" for establishment of Industries of M/s Prem Sugars & Chemicals Corporation Ltd."

May please be read as;

"Government is pleased to accord approval for change of activity from Sugar project to development of "Industrial Park by Prem Sugars & Chemicals Corporation Limited." for establishment of Industries".

The other terms and conditions remain the same as in the Government Order read at above.

PR. 620
SC. 20

By Order and in the name of the Governor of Karnataka,
S. UMADEVI,
Desk Officer (Technical Cell),
Commerce & Industries Department.

FOREST, ECOLOGY AND ENVIRONMENT SECRETARIAT

Sub: Diverstion of 0.098 ha. of forest land in Hunchur Village Sy.No.88 of Bettakote SF in Bengaluru Rural Division for laying of OFC of 7 No's. (40/33 MM) HDPE Duct from Sadarahalli gate to KIADB area (ITBT Part Near Bengaluru International Airport), in favour of M/s Reliance Jio Infocomm Limited (RJIL), Bengaluru-reg.

Read:
1) Letter No. A5(4)GFL.CR. 18/2013-14, dated: 10.09.2014 of Principal Chief Conservator of Forests, Bengaluru.
2) Government of India letter No. F.No. 11-9/98-FC, dated: 21.11.2005, 27-12-2007, 08.04.2009 and 13.02.2014.
3) Government Order even number dated: 08.12.2014.

Preamble:

The Principal Chief Conservator of Forests, Bengaluru vide his letter dated 19.04.2008 read at (1) above had submitted the proposal for diversion of 0.098 ha. of forest land in Hunchur Village Sy.No.88 of Bettakote SF in Bengaluru Rural Division for laying of OFC of 7 No's. (40/33 MM) HDPE Duct from Sadarahalli gate to KIADB area (ITBT Park Near Bengaluru International Airport), in favour of M/s Reliance Jio Infocomm Limited (RJIL), Bengaluru subject to certain conditions.

This proposal had been examined as per the general approval of Government of India, vide its guidelines dated: 21.11.2005, 27.12.2007, 08.04.2009 and 13.02.2014 and the sanction was accorded for diversion of 0.08 ha. of forest land under the Forest (Conservation) Act, 1980.

As this proposal was approved in the offline mode and whereas this proposal now needs to be processed through the on-line mode of the Ministry of Environment, Forests and Climate Change, Government of India, the Government Order even number referred

at (3) above needs to be withdrawn, since the above proposal needs to be processed in the on-line mode. Hence, the Order.

GOVERNMENT ORDER No. FEE 130 FLL 2014, BENGALURU, DATED: 27.08.2016

In the circumstances explained in the preamble above, the Government Order of even number dated: 08.12.2014 is hereby withdrawn.

PR. 621
SC. 50

By Order and in the name of the Governor of Karnataka,
L. SHARADA
Under Secretary to Government,
Forest, Ecology and Environment Department.

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ನಿರ್ವಹಣೆಯಲ್ಲಿರುವ ಪ್ರಸ್ತುತ 91 ಕೆರೆಗಳ ಪೈಕಿ 60 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಅಪಜೀ/172/ಇಸಿಓ/2007 ದಿನಾಂಕ: 28.03.2008
2) ಸರ್ಕಾರಿ ಆದೇಶ ಸಂಖ್ಯೆ: ಅಪಜೀ/110/ಇಸಿಓ/2008 ದಿನಾಂಕ: 20.05.2009
3) ಸರ್ಕಾರಿ ಆದೇಶ ಸಂಖ್ಯೆ: ನಅಇ/291/ಎಂಎನ್‌ವೈ/2010 ದಿನಾಂಕ: 06.08.2010
4) ಸರ್ಕಾರಿ ಆದೇಶ ಸಂಖ್ಯೆ: ನಅಇ/865/ಎಂಎನ್‌ವೈ/2010 ದಿನಾಂಕ: 03.05.2011
5) ಸರ್ಕಾರಿ ಆದೇಶ ಸಂಖ್ಯೆ: ನಅಇ/441/ಎಂಎನ್‌ವೈ/2011 ದಿನಾಂಕ: 25.01.2012
6) ಸರ್ಕಾರಿ ಆದೇಶ ಸಂಖ್ಯೆ: ನಅಇ/445/ಬೆಂಅಸೇ 2014, ದಿನಾಂಕ: 06.02.2016
7) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಬೆಂಅಪ್ರಾ/ಆಯುಕ್ತರು/ಅಸೆ/ಟಿ–2007/2016–17, ದಿನಾಂಕ: 26.08.2016.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಿಂದ (5)ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ ಈ ಕೆಳಗಿನಂತೆ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು 122 ಕೆರೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿತ್ತು.

ಕ್ರ.ಸಂ.	ಸರ್ಕಾರದ ಆದೇಶ ಸಂಖ್ಯೆ	ಹಸ್ತಾಂತರಿಸಿದ ಕೆರೆಗಳ ಸಂಖ್ಯೆ
1	ಸರ್ಕಾರಿ ಆದೇಶ ಸಂಖ್ಯೆ: ಅಪಜೀ/172/ಇಸಿಓ/2007 ದಿನಾಂಕ: 28.03.2008	11 ಕೆರೆಗಳು
2	ಸರ್ಕಾರಿ ಆದೇಶ ಸಂಖ್ಯೆ: ಅಪಜೀ/110/ಇಸಿಓ/2008 ದಿನಾಂಕ: 20.05.2009	2 ಕೆರೆಗಳು
3	ಸರ್ಕಾರಿ ಆದೇಶ ಸಂಖ್ಯೆ: ನಅಇ/291/ಎಂಎನ್‌ವೈ/2010 ದಿನಾಂಕ: 06.08.2010	29 ಕೆರೆಗಳು
4	ಸರ್ಕಾರಿ ಆದೇಶ ಸಂಖ್ಯೆ: ನಅಇ/865/ಎಂಎನ್‌ವೈ/2010 ದಿನಾಂಕ: 03.05.2011	2 ಕೆರೆಗಳು
5	ಸರ್ಕಾರಿ ಆದೇಶ ಸಂಖ್ಯೆ: ನಅಇ/441/ಎಂಎನ್‌ವೈ/2011 ದಿನಾಂಕ: 25.01.2012	78 ಕೆರೆಗಳು
	ಒಟ್ಟು	**122 ಕೆರೆಗಳು**

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಆದೇಶದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ನಿರ್ವಹಣೆಯಲ್ಲಿದ್ದ 22 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿ ಆದೇಶಿಸಲಾಗಿತ್ತು.

ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಇವರ ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಕೆರೆಗಳ ಪೈಕಿ 117 ಕೆರೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದ್ದು, ಅನಂತರ ಸರ್ಕಾರದ ಆದೇಶದಂತೆ, ಈ ಪೈಕಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯೋಜನಾ ಪ್ರದೇಶದಲ್ಲಿರುವ ಪ್ರಸ್ತುತ 22 ಕೆರೆಗಳನ್ನು ಪ್ರಾಧಿಕಾರದ ತಾಂತ್ರಿಕ ವಿಭಾಗದಿಂದಲೂ ಮತ್ತು 04 ಕೆರೆಗಳನ್ನು ಪ್ರಾಧಿಕಾರದ ಉಪಅರಣ್ಯ ಸಂರಕ್ಷಣಾಧಿಕಾರಿಗಳ ವಿಭಾಗದಿಂದ ಸೇರಿದಂತೆ ಒಟ್ಟು 26 ಕೆರೆಗಳನ್ನು ಮಾತ್ರ ಪ್ರಾಧಿಕಾರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದ್ದು, ಪ್ರಸ್ತುತ 91 ಕೆರೆಗಳು ಮಾತ್ರ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿದ್ದು, ಈ ಕೆರೆಗಳ ನಿರ್ವಹಣೆಗಾಗಿ ಮತ್ತು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸುಮಾರು ರೂ. 2000ಕೋಟಿಗಳಿಗಿಂತ ಹೆಚ್ಚು ಆರ್ಥಿಕ ಸಂಪನ್ಮೂಲದ ಅವಶ್ಯವಿದ್ದು, ಪ್ರಸ್ತುತ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲದಿರುವ ಕಾರಣ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಗರಕ್ಕೆ ಅನೇಕ ಮೂಲಸೌಕರ್ಯಗಳನ್ನು ಒದಗಿಸುವ ಬೃಹತ್ ಯೋಜನೆಗಳನ್ನು ಕೈಗೊಳ್ಳಲು ಕಷ್ಟ ಸಾಧ್ಯವಾಗುತ್ತಿದ್ದು, ಇದರ ಜೊತೆಯಲ್ಲಿ ಕೆರೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ, ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ವ್ಯಾಪ್ತಿಯಲ್ಲಿರುವ 91 ಕೆರೆಗಳ ಪೈಕಿ 60 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 449 ಬೆಂಅಸೇ 2016 ಬೆಂಗಳೂರು, ದಿನಾಂಕ: 14.09.2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿರುವ ಅನುಬಂಧದಲ್ಲಿ ನಮೂದಿಸಿರುವ 60 ಕೆರೆಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿ ಆದೇಶಿಸಿದೆ.

ಷರತ್ತುಗಳು:–

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 82 ಐಎಂಬಿ 85 ಬೆಂಗಳೂರು ದಿನಾಂಕ: 11.02.1988 ರಲ್ಲಿ ಮಾಡಲಾದ ಶಿಫಾರಸ್ಸುಗಳನ್ನು ಅನುಸರಿಸತಕ್ಕದ್ದು ಮತ್ತು ಕೆರೆಗಳನ್ನು ಶುದ್ಧ ಜಲಕಾಯಗಳಂತೆಯೇ ನಿರ್ವಹಿಸುವುದು, ಹೂಳು ತುಂಬಿದ/ನಿರುಪಯುಕ್ತ ಕೆರೆಗಳನ್ನು ಮೂಲ ಸ್ಥಿತಿಗೆ ಪುನರುಜ್ಜೀವನಗೊಳಿಸುವುದು.

2. ಕೆರೆಗಳ ಒಡೆತನವು ಸರ್ಕಾರದ್ದಾಗಿ ಕಂದಾಯ ಇಲಾಖೆಯಲ್ಲಿ ಉಳಿದಿರತಕ್ಕದ್ದು ಹಾಗೂ ಅಗತ್ಯವಾದಾಗ ಹಿಂದಕ್ಕೆ ಪಡೆಯುವ/ಮರುಹಂಚಿಕೆ ಮಾಡುವ ಹಕ್ಕನ್ನು ಸರ್ಕಾರವು ಹೊಂದಿರುತ್ತದೆ. ಕೆರೆಗಳನ್ನು ಪುನರುಜ್ಜೀವನ, ಸಂರಕ್ಷಣೆ ಮತ್ತು ಅಭಿವೃದ್ಧಿ ಉದ್ದೇಶಕ್ಕಾಗಿ ಮಾತ್ರ ಹಸ್ತಾಂತರಿಸಲಾಗಿದೆ.

3. ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ಕಂದಾಯ ಇಲಾಖೆ ಮತ್ತು ಬೆಂಗಳೂರು ಮಹಾನಗರ ಕಾರ್ಯಪಡೆಯ ಅಗತ್ಯ ನೆರವಿನೊಂದಿಗೆ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸತಕ್ಕದ್ದು.

4. ಕೆರೆಗಳನ್ನು ಹಸ್ತಾಂತರಿಸುವುದಕ್ಕೆ ಮುಂಚೆ ಯಾವುದೇ ನ್ಯಾಯಾಲಯದಲ್ಲಿ ಬಾಕಿ ಇರುವ ವ್ಯಾಜ್ಯಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪರಿಣಾಮಕಾರಿಯಾಗಿ ನಿರ್ವಹಿಸತಕ್ಕದ್ದು ಹಾಗೂ ಇನ್ನು ಮುಂದೆ ನ್ಯಾಯಾಲಯದಲ್ಲಿ ಬಾಕಿ ಇರುವ ಇಂತಹ ಎಲ್ಲಾ ಪ್ರಕರಣಗಳಲ್ಲಿ ಒಬ್ಬ ಪ್ರತ್ಯರ್ಜಿದಾರನನ್ನಾಗಿ ಸೇರಿಸಿಕೊಳ್ಳುವಂತೆ ನ್ಯಾಯಾಲಯದಲ್ಲಿ ಅಫಿಡವಿಟ್ ಅನ್ನು ಸಲ್ಲಿಸತಕ್ಕದ್ದು.

5. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆರೆಗಳ ಅಭಿವೃದ್ಧಿ ಕೈಗೆತ್ತಿಕೊಳ್ಳುವ ಮುನ್ನ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಕ್ಕದ್ದು ಮತ್ತು ಅದಕ್ಕೆ ಕೆರೆ ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆಯನ್ನು ಪಡೆಯತಕ್ಕದ್ದು.

6. ಕೆರೆ ಅಭಿವೃದ್ಧಿ ಪ್ರಾಧಿಕಾರವು ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಚಟುವಟಿಕೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡಲು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ.

7. ಒತ್ತುವರಿಯಿಂದ ಕೆರೆಗಳನ್ನು ರಕ್ಷಿಸುವ ದೃಷ್ಟಿಯಿಂದ ಮತ್ತು ಕೆರೆಗಳ ಪರಿಣಾಮಕಾರಿ ನಿರ್ವಹಣೆಗಾಗಿ ಹಾಗೂ ಕೆರೆಗಳಲ್ಲಿನ ಪ್ರಾಣಿ ಪಕ್ಷಿ ಸಂಕುಲಗಳ ನೆಲೆಯ ಸಂರಕ್ಷಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿಯೋಜನೆ ಮೇಲೆ ನೇಮಿಸಲ್ಪಡುವ ಅರಣ್ಯ ಅಧಿಕಾರಿ/ಸಿಬ್ಬಂದಿಗಳ ನಿಕಟ ಮೇಲ್ವಿಚಾರಣೆಯಲ್ಲಿ ಕೆರೆಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೈಗೊಳ್ಳತಕ್ಕದ್ದು.

8. ಕೆರೆಗಳ ಅಭಿವೃದ್ಧಿ ಕಾರ್ಯವನ್ನು ವಹಿಸಿರುವ ಸಂಸ್ಥೆಗಳಿಗೆ ಈಗಿರುವ ಕಾನೂನುಗಳ ಪ್ರಕಾರ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಮತ್ತು ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ನಿರ್ವಹಿಸಲು ಅಧಿಕಾರ ನೀಡಲಾಗಿದೆ.

9. ಕೊಳಚೆ ನೀರು ಹಾಗೂ ಹೊಲಸನ್ನು ಕೆರೆಗಳಿಗೆ ಹರಿಸಬಾರದು, ಒತ್ತುವರಿಯನ್ನು ತೆರವುಗೊಳಿಸಬೇಕು ಮತ್ತು ಅಗತ್ಯ ತಾಂತ್ರಿಕ ಅಭಿಪ್ರಾಯವನ್ನು ಪಡೆದುಕೊಂಡ ನಂತರ ನೆಡುತೋಪುಗಳ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು ಎಂಬುದಾಗಿ ಕರ್ನಾಟಕದ ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 1841/2006 ದಿನಾಂಕ: 17.09.2008ರಲ್ಲಿ ನೀಡಿರುವ ನಿರ್ದೇಶನಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

10. ಈ ಕೆರೆಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕರ್ನಾಟಕ ಅರಣ್ಯ ಇಲಾಖೆ ಮತ್ತು ಇತರ ಸಂಸ್ಥೆಗಳಿಂದ ಸೃಜಿಸಲ್ಪಟ್ಟಿರುವ ಸ್ವತ್ತುಗಳನ್ನು ಪಟ್ಟಿ ಮಾಡತಕ್ಕದ್ದು, ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ನರಸಿಂಹಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ನಅಇ 449 ಬೆಂಆಸೇ 2016 ದಿನಾಂಕ: 14.09.2016ಕ್ಕೆ ಅನುಬಂಧ

ಕ್ರ.ಸಂ.	ಹಸ್ತಾಂತರಿಸುವ ಕೆರೆಗಳ ಪಟ್ಟಿ	ತಾಲ್ಲೂಕು ಹೆಸರು	ಕೆರೆ ವಿಸ್ತೀರ್ಣ	
			ಎಕರೆ	ಗುಂಟೆ
1	ಜಿಮ್‌ಕೆನಹಳ್ಳಿ ಕೆರೆ	ಬೆಂಗಳೂರು ಪೂರ್ವ	8	24
2	ಕಲ್ಕರೆ–ರಾಂಪುರ ಕೆರೆ	ಬೆಂಗಳೂರು ಪೂರ್ವ	107	2
3	ನಗರೇಶ್ವರ ನಾಗೇನಹಳ್ಳಿ ಕೆರೆ	ಬೆಂಗಳೂರು ಪೂರ್ವ	11	8
4	ಚಿಕ್ಕಬೆಟ್ಟಹಳ್ಳಿ ಕೆರೆ	ಬೆಂಗಳೂರು ಉತ್ತರ	1	32
5	ಅಬ್ಬಿಗೆರೆ ಕೆರೆ	ಬೆಂಗಳೂರು ಉತ್ತರ–ಹೆಚ್ಚುವರಿ	47	13
6	ಬೆಲ್ಲಹಳ್ಳಿ ಕೆರೆ	ಬೆಂಗಳೂರು ಉತ್ತರ–ಹೆಚ್ಚುವರಿ	18	32
7	ಲಕ್ಷ್ಮೀಪುರ ಕೆರೆ	ಬೆಂಗಳೂರು ಉತ್ತರ–ಹೆಚ್ಚುವರಿ	10	20
8	ಶಿವನಹಳ್ಳಿ ಕೆರೆ	ಬೆಂಗಳೂರು ಉತ್ತರ–ಹೆಚ್ಚುವರಿ	18	12
9	ಶ್ರೀನಿವಾಸಪುರ ಕೆರೆ	ಬೆಂಗಳೂರು ಉತ್ತರ–ಹೆಚ್ಚುವರಿ	3	14
10	ವಡೇರಹಳ್ಳಿ ಕೆರೆ	ಬೆಂಗಳೂರು ಉತ್ತರ–ಹೆಚ್ಚುವರಿ	9	34
11	ವಿಭೂತಿಪುರ ಕೆರೆ	ಬೆಂಗಳೂರು ಪೂರ್ವ	45	18
12	ಕೋನಸಂದ್ರ ಕೆರೆ	ಬೆಂಗಳೂರು ದಕ್ಷಿಣ	37	14
13	ಕೊತ್ತನೂರು ಕೆರೆ	ಬೆಂಗಳೂರು ದಕ್ಷಿಣ	18	9
14	ಸೋಂಪುರ ಕೆರೆ	ಬೆಂಗಳೂರು ದಕ್ಷಿಣ	18	20
15	ತಲಘಟ್ಟಪುರ ಕೆರೆ	ಬೆಂಗಳೂರು ದಕ್ಷಿಣ	19	16
16	ವೆಂಕಟೇಶಪುರ ಕೆರೆ	ಬೆಂಗಳೂರು ಉತ್ತರ	10	35
17	ಬೆಳ್ಳಂದೂರು ಕೆರೆ	ಬೆಂಗಳೂರು ಪೂರ್ವ	919	17
18	ವರ್ತೂರು ಕೆರೆ	ಬೆಂಗಳೂರು ಪೂರ್ವ	470	34
19	ಹರಳುಕುಂಟೆ ಕೆರೆ/ಸೋಮಸಂದ್ರ ಕೆರೆ	ಬೆಂಗಳೂರು ದಕ್ಷಿಣ	16	29

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

20	ಮಹದೇವಪುರ ಕೆರೆ	ಬೆಂಗಳೂರು ಪೂರ್ವ	13	11
21	ಮೇಸ್ತ್ರಿಪಾಳ್ಯ ಕೆರೆ	ಬೆಂಗಳೂರು ದಕ್ಷಿಣ	9	18
22	ಜುನ್ನಸಂದ್ರ ಕೆರೆ	ಬೆಂಗಳೂರು ಪೂರ್ವ	24	33
23	ಸೀತಾರಾಂಪಾಳ್ಯ ಕೆರೆ	ಬೆಂಗಳೂರು ಪೂರ್ವ	23	37
24	ನಲ್ಲೂರಹಳ್ಳಿ ಕೆರೆ	ಬೆಂಗಳೂರು ಪೂರ್ವ	47	39
25	ಕೆಳಗಿನ ಕೆರೆ/ಬೈರಸಂದ್ರ ಕೆರೆ	ಬೆಂಗಳೂರು ಪೂರ್ವ	12	21
26	ಗುಂಜೂರು ಮೌಜಿ ಕೆರೆ	ಬೆಂಗಳೂರು ಪೂರ್ವ	63	39
27	ಗುಂಜೂರು ಪಾಳ್ಯ ಕೆರೆ	ಬೆಂಗಳೂರು ಪೂರ್ವ	36	27
28	ಆಲಹಳ್ಳಿ/ಅಂಜನಾಪುರ ಕೆರೆ	ಬೆಂಗಳೂರು ದಕ್ಷಿಣ	21	25
29	ಬಸಾಪುರ ಕೆರೆ	ಬೆಂಗಳೂರು ದಕ್ಷಿಣ	10	29
30	ಬಸವನಪುರ ಕೆರೆ	ಬೆಂಗಳೂರು ದಕ್ಷಿಣ	7	34
31	ಚೌಡೇಶ್ವರಿ/ಬೆರಟನ ಅಗ್ರಹಾರ ಕೆರೆ	ಬೆಂಗಳೂರು ದಕ್ಷಿಣ	11	34
32	ಚಿಕ್ಕಬೇಗೂರು ಕೆರೆ	ಬೆಂಗಳೂರು ದಕ್ಷಿಣ	43	5
33	ಚುಂಚಘಟ್ಟ ಕೆರೆ	ಬೆಂಗಳೂರು ದಕ್ಷಿಣ	20	31
34	ದೇವರ ಕೆರೆ	ಬೆಂಗಳೂರು ದಕ್ಷಿಣ	7	15
35	ದೊಡ್ಡಕಲ್ಲಸಂದ್ರ ಕೆರೆ	ಬೆಂಗಳೂರು ದಕ್ಷಿಣ	21	16
36	ಗೌಡನಪಾಳ್ಯ ಕೆರೆ (ಕದಿರೇನಹಳ್ಳಿ)	ಬೆಂಗಳೂರು ದಕ್ಷಿಣ	9	30
37	ಗುಬ್ಬಲಾಳು ಕೆರೆ	ಬೆಂಗಳೂರು ದಕ್ಷಿಣ	8	10
38	ಹುಳಿಮಾವು ಕೆರೆ	ಬೆಂಗಳೂರು ದಕ್ಷಿಣ	145	26
39	ಕೋನಪ್ಪನ ಅಗ್ರಹಾರ ಕೆರೆ	ಬೆಂಗಳೂರು ದಕ್ಷಿಣ	5	17
40	ಲಿಂಗದೀರನಹಳ್ಳಿ ಕೆರೆ	ಬೆಂಗಳೂರು ದಕ್ಷಿಣ	5	22
41	ಮೀನಾಕ್ಷಿ ಕೆರೆ	ಬೆಂಗಳೂರು ದಕ್ಷಿಣ	18	32
42	ನ್ಯಾನಪ್ಪನಹಳ್ಳಿ ಕೆರೆ	ಬೆಂಗಳೂರು ದಕ್ಷಿಣ	6	7
43	ಪಟ್ಟಣಗೆರೆ/ಕೆಂಚನಹಳ್ಳಿ ಕೆರೆ	ಬೆಂಗಳೂರು ದಕ್ಷಿಣ	4	30
44	ಸುಬೇದಾರನ ಕೆರೆ	ಬೆಂಗಳೂರು ದಕ್ಷಿಣ	6	5
45	ವರಹಸಂದ್ರ ಕೆರೆ	ಬೆಂಗಳೂರು ದಕ್ಷಿಣ	17	20
46	ವಸಂತಪುರ ಕೆರೆ	ಬೆಂಗಳೂರು ದಕ್ಷಿಣ	7	10
47	ಎಲ್ಲೇನಹಳ್ಳಿ ಕೆರೆ	ಬೆಂಗಳೂರು ದಕ್ಷಿಣ	4	39
48	ಚಿಕ್ಕಕಮ್ಮನಹಳ್ಳಿ ಕೆರೆ	ಬೆಂಗಳೂರು ದಕ್ಷಿಣ	6	19
49	ಸ್ವರ್ಣಕುಂಟೆ ಗುಡ್ಡೆಕೆರೆ	ಬೆಂಗಳೂರು ದಕ್ಷಿಣ	9	5
50	ಭೀಮಪ್ಪನಕುಪ್ಪೆ ಕೆರೆ	ಬೆಂಗಳೂರು ದಕ್ಷಿಣ	39	24
51	ಚಿಕ್ಕಬಸ್ತಿಕೆರೆ	ಬೆಂಗಳೂರು ದಕ್ಷಿಣ	7	2.7
52	ಗಾಂಧಿನಗರ ಕೆರೆ (ಹೊಸಕೆರೆ	ಬೆಂಗಳೂರು ಉತ್ತರ	43	30
53	ಕನ್ನಲ್ಲಿ ಕೆರೆ	ಬೆಂಗಳೂರು ದಕ್ಷಿಣ	68	19
54	ಕೆಂಚನಪುರ ಕೆರೆ	ಬೆಂಗಳೂರು ದಕ್ಷಿಣ	17	20
55	ನರಸಪ್ಪನಹಳ್ಳಿ ಕೆರೆ	ಬೆಂಗಳೂರು ಉತ್ತರ	53	24
56	ಶ್ರೀಗಂಧಕಾವಲು ಕೆರೆ	ಬೆಂಗಳೂರು ಉತ್ತರ	6	33
57	ಸೂಲಿಕೆರೆ	ಬೆಂಗಳೂರು ದಕ್ಷಿಣ	53	7
58	ದೊಡ್ಡಬಿದರಕಲ್ಲು ಕೆರೆ	ಬೆಂಗಳೂರು ಉತ್ತರ	40	5
59	ಕೆ.ಆರ್.ಪುರಂ (ಬಿ.ಇ.ಎಂ.ಎಲ್.ಕೆರೆ)–ಬೆನ್ನಿಗಾನಹಳ್ಳಿ ಕೆರೆ	ಬೆಂಗಳೂರು ಪೂರ್ವ	45	39
60	ಕೋಣನಕುಂಟೆ ಕೆರೆ	ಬೆಂಗಳೂರು ದಕ್ಷಿಣ	10	14

PR. 622

SC. 100

ಎನ್. ನರಸಿಂಹಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.